## ಬೇಬಿ ಕಾರ್ನ್



ಇತ್ತೀಚೆಗೆ ಹೋಟೆಲಿಗೆ ಹೋದಾಗ ಎಂದಿನಂತೆ ಮಸಾಲೆ ದೋಸೆ ಆರ್ಡರ್ ಮಾಡಿದೆ. 'ನನಗೊಂದು ಬೇಬಿ ಕಾರ್ನ್ ಮಂಚೂರಿ' ಎಂದು ಮಗಳು ನೆನಪಿಸಿದಳು. ಆಗ ಅವಳ ಮಗ ಐದು ವರ್ಷದ ಹರಿ, 'ನಿನಗ್ಯಾಕೆ ಬೇಬಿ ಕಾರ್ನ್ ಮಂಚೂರಿ? ನೀನು ದೊಡ್ಡವಳು. ಅದನ್ನ ನಾನು ಮಾತ್ರ ತಿನ್ನಬಹುದು. ಏಕೆಂದರೆ ನಾನು ಬೇಬಿ' ಎಂದು ತಿನಿಸು ಬರುವ ಮೊದಲೇ ಅದನ್ನು ತನ್ನದಾಗಿಸಿಕೊಂಡ!

**ಕೆ.ವಿ. ರಾಜಲಕ್ಷ್ಮಿ**

## ಭಾಷಾ ಅವಾಂತರ

ನಾವು ಹುಬ್ಬಳ್ಳಿಯಲ್ಲಿ ಇರುವಾಗ ನಡೆದ ಘಟನೆ. ನಮ್ಮ ನೆರೆಮನೆಯಲ್ಲಿ ತೆಲುಗು ಮಾತನಾಡುವ ಕುಟುಂಬ ಒಂದಿತ್ತು. ಅವರ ಮನೆಯಲ್ಲಿ ಒಬ್ಬ ಅಜ್ಜಿ ಇದ್ದರು. ಅವರಿಗೆ ಸದಾ ತಮ್ಮ ಮೊಮ್ಮಗನ ಗುಣಗಾನ ಮಾಡುವುದೇ ಕೆಲಸ. ಅವರ ಮೊಮ್ಮಗ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ. ಅಜ್ಜಿಯ ಕತೆ ಕೇಳಬೇಕೆ? ಊರತುಂಬ ಮೊಮ್ಮಗನ ಗುಣಗಾನ ಮಾಡಿಕೊಂಡು ಬಂದರು. ಆಗ ನಾನು 'ನಿಮ್ಮ ಮೊಮ್ಮಗ ಪಾಸಾಗಿರುವುದಕ್ಕೆ ನೀವು ಮಾತ್ರ ಪೇಡಾ ತಿಂದರೆ ಆಯಿತೇ? ನಮಗಿಲ್ವೆ?' ಎಂದು ಕೇಳಿದಾಗ ಅಜ್ಜಿಗೆ ರೇಗಿ ಹೋಯಿತು. ಅವರ ಭಾಷೆಯಲ್ಲಿ ನಮ್ಮನ್ನು ಬೈಯತೊಡಗಿದರು. ಯಾಕೆ ಅಂತ ನಮಗೆ ಅರ್ಥವೇ ಆಗಲಿಲ್ಲ.



ಆಗ ಅಜ್ಜಿಯ ಸೊಸೆ ಬಂದು, ನಗುತ್ತ– 'ತೆಲುಗು ಭಾಷೆಯಲ್ಲಿ ಪೇಡಾ ಎಂದರೆ ಸಗಣಿ ಅಂತ ಅರ್ಥ. ನೀವು ಸಗಣಿ ತಿಂದ್ರಾ ಅಂತ ಕೇಳಿದ್ದೀರಿ ಅಂದುಕೊಂಡು ಅಜ್ಜಿ ಕೋಪ ಮಾಡಿಕೊಂಡಿದ್ದಾರೆ' ಎಂದು ಅಜ್ಜಿಯ ಸಿಟ್ಟಿಗೆ ಕಾರಣ ವಿವರಿಸಿದರು. ಅಜ್ಜಿಯನ್ನು ಸಮಾಧಾನ ಮಾಡಲು ನಮಗೆ ಸಾಕು ಸಾಕಾಯ್ತು.

**ಸಾವಿತ್ರಿ ಹೊಳ್ಳ**

ಚಿತ್ರಗಳು: ಗಣೇಶ ಆಚಾರ್ಯ